(ಶ್ರೀ ಎಂ. ಎಸ್. ಕೃಷ್ಣನ್)

ಹಾಗೆ ಮುಖ್ಯ ಮಂತ್ರಿಗಳು ಹೋಗಿ ಚರ್ಚೆ ಮಾಡಿಕೊಂಡು ಬಂದರೆ ನಂಜಯ್ಯಕ್ಕೆ ಎಡೆಕೊಟ್ಟಂತಾಗುತ್ತದೆ. ರಾಜ್ಯದ ಜನತೆಯ ಹಿತಕ್ಕೆ ಧಕ್ಕೆ ಬರಬಹುದು ಎಂಬ ಅನುಮಾನವಿದೆ. ಆದುದರಿಂದ ಇಲ್ಲಿ ಇದರ ಬಗ್ಗೆ ಚರ್ಚೆಗೆ ಅವಕಾಶಮಾಡಿಕೊಡಬೇಕು ಮತ್ತು ಚನ್ನಬಸಪ್ಪನವರಾಗಲೀ ಮುಖ್ಯ ಮಂತ್ರಿಗಳಾಗಲೀ ಹೇಳಿಕೆ ಕೊಡಬೇಕು.

ಅಧ್ಯಕ್ಷರು.—ನೋಟೀಸನ್ನು ಚೀಫ್ ಮಿನಿಸ್ಟರ್‌ರವರ ಆಫೀಸಿಗೆ ಕಳುಹಿಸಿಕೊಟ್ಟಿದ್ದೇವೆ. ಮುಖ್ಯಮಂತ್ರಿಗಳಾಗಲೀ ಅಥವಾ ಚನ್ನಬಸಪ್ಪನವರು ಆಗಲೀ ಸಾಯಂಕಾಲದೊಳಗೆ ಉತ್ತರ ಕೊಡಬಹುದು.

Terminating the Local Candidates

ಶ್ರೀ ಕೋಣಂದೂರು ಲಿಂಗಪ್ಪ.—ತಾರೀಖು 29-3-1973 ರಂದು ಎಲ್ಲಾ ಇಲಾಖೆಯಲ್ಲಿರುವ ಲೋಕಲ್ ಕ್ಯಾಂಡಿಡೇಟ್‌ಗಳನ್ನು ಏಪ್ರಿಲ್ 30 ಆದ ಮೇಲೆ ಬರ್ತಫ್ ವಜಾಮಾಡುತ್ತಾರೆ, ಅವರ ಬಗ್ಗೆ ಒಂದು ನೋಟೀಸ್ ಕಳುಹಿಸಿದ್ದೆ. ಸರ್ಕಾರದವರು ತಕ್ಷಣ ಉತ್ತರ ಕೊಡಬೇಕು.

ಅಧ್ಯಕ್ಷರು.—ಅದನ್ನು ನೋಡೋಣ.

Supply of Electricity to Tamilnadu

ಎಂ. ಎಸ್. ಕೃಷ್ಣನ್.—ಮಾನ್ಯ ಅಜೀಜ್‌ಸೇಠ್‌ರವರು ತಮಿಳುನಾಡು ರಾಜ್ಯದೊಡನೆ ವಿದ್ಯುಚ್ಛಕ್ತಿ ಸರಬರಾಯಿ ಬಗ್ಗೆ ಮಾಡಿಕೊಂಡ ಅಗ್ರಿಮೆಂಟ್ ಬಗ್ಗೆ 312 ರೂಲಿನ ಕೆಳಗೆ ಒಂದು ನೋಟೀಸ್ ಕೊಟ್ಟಿದ್ದೇನೆ. ಅದಕ್ಕೆ ಉತ್ತರ ಕೊಡಿಸಿಕೊಡಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರ ಬಗ್ಗೆ ಸಾಯಂಕಾಲ ಬೇಕಾದರೆ ಹೇಳಿಕೆ ಕೊಡುತ್ತೇನೆ.

Disfiguring the Statue of Dr. Ambedkar

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ರಾಜ್ಯ ನಿರ್ಮಾಣ ಮಾಡಿದ ಮಹಾ ಪುರುಷ, ಡಾ. ಅಂಬೇಡ್ಕರ್‌ರವರ ಪ್ರತಿಮೆಯನ್ನು ಕೆಡಿಸಿದ್ದಾರೆ, ಇದರ ಬಗ್ಗೆ ಸ್ಟೇಟ್‌ಮೆಂಟನ್ನು ಯಾವಾಗ ಕೊಡುತ್ತಾರೆ ?

ಅಧ್ಯಕ್ಷರು.—ಮುಖ್ಯಮಂತ್ರಿಗಳು ಬರಲಿ, ಬಂದ ಮೇಲೆ ನೋಡೋಣ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ಆದಷ್ಟು ಜಾಗ್ರತೆ ಸಮಾಚಾರ ತರಿಸಿ ಈ ಮನೆಗೆ ಹೇಳಿಕೆ ಕೊಡುವಂತೆ ಮಾಡಬೇಕು.

BUDGET ESTIMATES FOR 1973-74

Demands for Grants

Demand Nos. 20, 38, and 51 (Debate continued)

† ಶ್ರೀ ಎಂ. ಮಲ್ಲಪ್ಪ (ಬೀರೂರು).—ಸನ್ಮಾನ್ಯ ಅಧ್ಯಕ್ಷಣಿಯವರೇ, ನಮಿವರು ಈ ಮನೆಯಲ್ಲಿ ಮಂಡಿಸಿರುವ ವ್ಯವಸಾಯ ಅರಣ್ಯ ಇಲಾಖೆಗಳ ಹಾಗೂ ಅಗ್ರಿಕಲ್ಚರ್‌ಗೆ ಸಂಬಂಧಪಟ್ಟ ಬೇಡಿಕೆಗಳಿಗೆ ನನ್ನ ಬೆಂಬಲವನ್ನು ಸೂಚಿಸುತ್ತ ಒಂದೆರಡು ಸಲಹೆಗಳನ್ನು ಈ ಸಂದರ್ಭದಲ್ಲಿ ನೀಡಬಯಸುತ್ತೇನೆ.